# ದೇಶಾದ್ಯಂತ ರಕ್ತನಿಧಿಗಳ ಸಂಪರ್ಕ

## ಮಾಸಾಂತ್ಯಕ್ಕೆ ಕಾರ್ಯನಿರ್ವಹಣೆ ಆರಂಭ | ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡ

**ಬೆಂಗಳೂರು:** ತುರ್ತು ಸಂದರ್ಭದಲ್ಲಿ ರಕ್ತ ಪೂರೈಕೆ ಆಗದೆ ರೋಗಿಗಳು ಪರದಾಡುವುದನ್ನು ತಪ್ಪಿಸಲು ದೇಶಾದ್ಯಂತ ಎಲ್ಲ ರಕ್ತನಿಧಿಗಳನ್ನೂ ಒಂದೇ ವ್ಯವಸ್ಥೆಯಡಿ ಸಂಪರ್ಕಿಸುವ ಕಾರ್ಯ ನಡೆಯುತ್ತಿದೆ ಎಂದು ಕೇಂದ್ರ ಆರೋಗ್ಯ ಸಚಿವ ಜಗತ್ ಪ್ರಕಾಶ್ ನಡ್ಡ ಶನಿವಾರ ತಿಳಿಸಿದ್ದಾರೆ.

ಅದಮ್ಯ ಚೇತನ ಸಂಸ್ಥೆ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆಸುತ್ತಿರುವ ಅದಮ್ಯ ಚೇತನ ಸೇವಾ ಉತ್ಸವದ ಮೂರನೇ ದಿನದ ಕಾರ್ಯಕ್ರಮದಲ್ಲಿ ಸಂಸ್ಥೆಯ ವೆಬ್‌ಸೈಟ್ www.raktadan.org ಮರು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ವಿವಿಧ ರಕ್ತನಿಧಿಗಳಲ್ಲಿರುವ ಸಂಗ್ರಹಗಳ ಸಂಪೂರ್ಣ ವಿವರವನ್ನು ಆನ್‌ಲೈನ್ ಮೂಲಕ ಕೇಂದ್ರೀಕೃತ ವ್ಯವಸ್ಥೆ ಜತೆ ಸಂಪರ್ಕಿಸಲಾಗುವುದು. ಹೀಗೆ ಒಂದೆಡೆ ಕೊರತೆ ಇರುವ ರಕ್ತವನ್ನು ಮತ್ತೊಂದು ರಕ್ತನಿಧಿಯಿಂದ ಪೂರೈಸಬಹುದು. ಈ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಮಾಸಾಂತ್ಯದ ಬಳಿಕ ಕಾರ್ಯನಿರ್ವಹಿಸಲಿದೆ ಎಂದರು.

ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಡಾ. ಸಿ.ಎನ್. ಮಂಜುನಾಥ್, ಡಾ. ಗಣೇಶ್ ನಾಯಕರ್, ಡಾ. ಬಿ.ಎನ್. ಗಂಗಾಧರ್, ಡಾ. ಶಶಿಧರ ಬುಗ್ಗಿ, ಡಾ. ವನಿತಕ್ಕ, ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ಮತ್ತಿತರ ವೈದ್ಯರನ್ನು ಸನ್ಮಾನಿಸಲಾಯಿತು. 'ಸೊಪ್ಪು ಸಂಜೀವಿನಿ' ಹಾಗೂ 'ಯೋಗಸಂಜೀವಿನಿ' ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಾಯಿತು. ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಮತ್ತಿತರರು ಉಪಸ್ಥಿತರಿದ್ದರು.




ಅದಮ್ಯ ಚೇತನ ಸೇವಾ ಉತ್ಸವದಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಡಾ.ಸಿ.ಎನ್. ಮಂಜುನಾಥ್ ಅವರನ್ನು ಕೇಂದ್ರ ಸಚಿವ ಜೆ.ಪಿ.ನಡ್ಡ ಸನ್ಮಾನಿಸಿದರು.

### ಇಂದು ಸಮಾರೋಪ

ಸೇವಾ ಉತ್ಸವದ ಅಂತಿಮ ದಿನವಾದ ಭಾನುವಾರ ಬೆ. 10 ಗಂಟೆಗೆ ಕಾರ್ಯಕ್ರಮ ಆರಂಭ ವಾಗಲಿವೆ. ಕೈಗಳಿಂದಲೇ ನರ್ತಿಸುವ ಗುಜರಾತ್‌ನ ಕಮಲೇಶ್ ಪಟೇಲ್ ಪ್ರದರ್ಶನ ನೀಡಲಿದ್ದಾರೆ. ಮುಂಬೈ ಡಬ್ಬಾವಾಲಾಗಳ ಸಂಘದ ಸಿಇಒ ಡಾ. ಪವನ್ ಅಗರ್ವಾಲ್ ಅನುಭವ ಹಂಚಿಕೊಳ್ಳಲಿದ್ದಾರೆ. ಇಂಡಿಯನ್ ಗೂಗಲ್ ಬಾಯ್ ಎಂದೇ ಖ್ಯಾತಿ ಪಡೆದ ಕೌಟಿಲ್ಯ ಪಂಡಿತ್ ಕಾರ್ಯಕ್ರಮ ನೀಡಲಿದ್ದಾರೆ. ಬಳಿಕ ನಡೆಯುವ 1 ಗಂಟೆ ಧ್ಯಾನದಲ್ಲಿ ಸಾವಿರಾರು ವಿದ್ಯಾರ್ಥಿಗಳು ಪ್ರಾಣಾಯಾಮ ನಡೆಸಲಿದ್ದಾರೆ. ಸಂಜೆ 4ಕ್ಕೆ ನಡೆಯುವ ಉತ್ಸವದ ಸಮಾರೋಪದಲ್ಲಿ ಕೇಂದ್ರ ಮಾನವ ಸಂಪನ್ಮೂಲ ಸಚಿವೆ ಸ್ಮೃತಿ ಇರಾನಿ ಭಾಗವಹಿಸಲಿದ್ದಾರೆ.

### ಟೆಲಿಮೆಡಿಸಿನ್ ಪ್ರಚುರಗೊಳ್ಳಲಿ

ವೈದ್ಯಕೀಯ ತಂತ್ರಜ್ಞಾನ ಹಾಗೂ ಮಾರುಕಟ್ಟೆ ಭರಾಟೆಯಲ್ಲಿ ಬಡರೋಗಿಗಳನ್ನು ಕಡೆಗಣಿಸಬಾರದು. ವೈದ್ಯಕೀಯ ಜ್ಞಾನ, ಕೌಶಲವಿದ್ದರಷ್ಟೇ ಸಾಲದು, ಸಾಮಾಜಿಕ ಕಾಳಜಿ-ಮಾನವೀಯತೆ ಮೈಗೂಡಿಸಿಕೊಳ್ಳಬೇಕು ಎಂದು ಸನ್ಮಾನ ಸ್ವೀಕರಿಸಿ ಮಾತನಾಡಿದ ಜಯದೇವ ಹೃದ್ರೋಗ ಸಂಸ್ಥೆಯ ಡಾ. ಸಿ.ಎನ್. ಮಂಜುನಾಥ್ ಹೇಳಿದರು. ತುರ್ತು ಪರಿಸ್ಥಿತಿಯಲ್ಲಿ ನಗರಗಳಿಗೆ ಕರೆತರಲು ವ್ಯವಸ್ಥೆಯಿಲ್ಲದ ಗ್ರಾಮೀಣ ರೋಗಿಗಳನ್ನು ಸ್ಥಳೀಯವಾಗಿಯೇ ಉಪಚರಿಸಲು ಸಾಧ್ಯವಾಗುವ ಟೆಲಿಮೆಡಿಸಿನ್ ತಂತ್ರಜ್ಞಾನವನ್ನು ಎಲ್ಲೆಡೆ ವಿಸ್ತರಿಸಬೇಕು ಎಂದರು. ಸಾವಯವ ಉತ್ಪನ್ನಗಳು ದುಬಾರಿಯಾದ ಕಾರಣ ಹಲವರು ರಾಸಾಯನಿಕ ಉತ್ಪನ್ನಗಳಿಗೆ ಮೊರೆ ಹೋಗಿ, ಪರೋಕ್ಷವಾಗಿ ವಿಷ ಸೇವಿಸುತ್ತಿದ್ದಾರೆ. ಕೇಂದ್ರ ಸರ್ಕಾರ ಸಾವಯವ ಉತ್ಪನ್ನಗಳಿಗೆ ಸಬ್ಸಿಡಿ ನೀಡಿ ದರ ಕಡಿತಕ್ಕೆ ಸಹಕರಿಸಬೇಕು. ಹೃದ್ರೋಗವನ್ನು 'ರಾಷ್ಟ್ರೀಯ ಪ್ರಾಮುಖ್ಯತೆಯ ಕಾಯಿಲೆ' ಎಂದು ಘೋಷಿಸಬೇಕು. ಶೀಘ್ರವಾಗಿ ರೋಗ ನಿಯಂತ್ರಿಸಲು ಮುಂದಾಗಬೇಕು ಎಂದರು. ಡಾ. ವನಿತಕ್ಕ ಮಾತನಾಡಿ, ವಿಶ್ವಾದ್ಯಂತ ಇಂದು ಯೋಗಕ್ಕೆ ಮನ್ನಣೆ ದೊರಕಿದೆ. ಯೋಗ ಹಾಗೂ ಪರಿಸರಸ್ನೇಹಿ ಜೀವನ ನಡೆಸಿದರೆ ಆರೋಗ್ಯ ಲಭ್ಯ. ಈ ವಿಚಾರ ಎಲ್ಲೆಡೆ ತಲುಪಬೇಕು ಎಂದರು.

"ವಿಜಯ ವಾಣಿ" "VIJAYAVANI" 03/01/2016 PAGE